# ಉಪವಿಭಾಗಾಧಿಕಾರಿಗಳ ನ್ಯಾಯಾಲಯ, ಪುತ್ತೂರು ಉಪವಿಭಾಗ , ಪುತ್ತೂರು

**ಪ್ರಕರಣದ ಸಂಖ್ಯೆ : ಎಡಿಸ್ ಆರ್.ಆರ್.ಟಿ.ಎಸ್.ಆರ್ 18/15-16**

**ದಿನಾಂಕ : 26 - 10 - 2016.**

**ಉಪಸ್ಥಿತರು : ಡಾ. ರಾಜೇಂದ್ರ ಕೆ ವಿ .ಭಾ.ಆ.ಸೇ.**

**ಉಪವಿಭಾಗಾಧಿಕಾರಿ**

**ಪುತ್ತೂರು ಉಪವಿಭಾಗ ಪುತ್ತೂರು**

ಮೇಲ್ಮನವಿದಾರರು

ಮಹಮ್ಮದೆ
ಬಿನ್ ಉಮ್ಮರ್ ಬ್ಯಾರಿ
ಪಡ್ನೂರು ಗ್ರಾಮ ,
ಪುತ್ತೂರು ತಾಲೂಕು, ದ.ಕ.
( ನ್ಯಾಯವಾದಿ: ಶ್ರೀ ಉದಯರವಿ ಕೆ)

ಪ್ರತಿವಾದಿಯವರು

ತಹಶೀಲ್ದಾರರು,
ಪುತ್ತೂರು ತಾಲೂಕು, ಪುತ್ತೂರು

**---**

ಪ್ರಸ್ತಾವನೆ :

ಮೇಲ್ಮನವಿದಾರರು ಈ ಮೇಲ್ಮನವಿಯನ್ನು ಕರ್ನಾಟಕ ಭೂಕಂದಾಯ ಅಧಿನಿಯಮ 1964 ರ ಕಲಂ 136 ರನ್ವಯ ಸಲ್ಲಿಸಿರುವುದಾಗಿದೆ. ಮೇಲ್ಮನವಿದಾರರು ಮೇಲ್ಮನವಿಯಲ್ಲಿ ಪುತ್ತೂರು ತಾಲೂಕು ಪಡ್ನೂರು ಗ್ರಾಮದ ಸ.ನಂ. 88/1ಎ1 ರ ಪೈಕಿ 0.15ಎಕ್ರೆ ಜಮೀನು ಎನ್ ಸಿ ಆರ್ ಎಸ್ ಆರ್ 152/91-92 ರಂತೆ ಜಮೀನು ಮೇಲ್ಮನವಿದಾರರಿಗೆ ಅಕ್ರಮಸಕ್ರಮದಡಿ ಮಂಜೂರಾಗಿ ಸಾಗುವಳಿ ಚೀಟಿ ನೀಡಿದ್ದು ಎಂ ಆರ್ ಎಸ್ ಆರ್ 67/98-99 ರಂತೆ ಪಹಣಿ ಧಾಖಲಿಸುವಾಗ ಕಡತ ಸಂಖ್ಯೆ ಎನ್ ಸಿ ಆರ್ ಎಸ್ ಆರ್ 132/91-92 ಎಂದು ಮ್ಯುಟೇಶನ್ ನಡವಳಿಯಲ್ಲಿ ತಪ್ಪಾಗಿ ದಾಖಲಾಗಿರುವುದನ್ನು ಸರಿಪಡಿಸಲು ಕೋರಿರುತ್ತಾರೆ. ಪ್ರಕರಣದ ಬಗ್ಗೆ ದಿನಾಂಕ: 29/04/2015 ರಿಂದ 22/06/2016 ರರವರೆಗೆ ವಾದಿ ಪ್ರತಿವಾದಿಗಳಿಗೆ ಯುಕ್ತ ಅವಕಾಶಗಳನ್ನು ನೀಡುವ ಮೂಲಕ ವಿಚಾರಣೆ ನಡೆಸಲಾಗಿದೆ ಮತ್ತು ಅಧೀನ ಕಛೇರಿಯ ಮೂಲ ಕಡತವನ್ನು ತರಿಸಿ ಪರಿಶೀಲಿಸಲಾಗಿದೆ.

ದಾಖಲೆಗಳ ಪರಿಶೀಲನೆ ವೇಳೆ ಅರ್ಜಿದಾಶರರ ಕೋರಿಕೆ ಸಮಂಜಸವೆಂದು ಕಂಡುಬಂದಿದೆ. ಪುತ್ತೂರು ತಾಲೂಕು ಉಪ್ಪಿನಂಗಡಿ ಹೋಬಳಿ ಪಡ್ನೂರು ಗ್ರಾಮದ ಸ.ನಂ: 88/1ಎ ಪೈಕಿ 0.15 ಎಕ್ರೆ ಜಮೀನಿಗೆ ಎನ್ ಸಿ ಆರ್ ಎಸ್ ಆರ್ 152/91-92 ದಿ: 18/05/98 ರಂತೆ ಹಕ್ಕುಪತ್ರ ನೀಡಿದ್ದು ಮ್ಯುಟೇಶನ್ ನಡವಳಿ ನಡೆಸುವಾಗ ಎಂ ಆರ್ ನಂ: 67/98-99 ದಿ: 10/06/1999 ರಲ್ಲಿ ಕಡತ ಸಂಖ್ಯೆ ತಪ್ಪಾಗಿ ಎನ್ ಸಿ ಆರ್ ಎಸ್ ಆರ್ 152/91-92 ರ ಬದಲಾಗಿ 132/91-92 ಎಂದು ದಾಖಲಿಸಲಿರುವುದು ಕಂಡು ಬರುತ್ತದೆ. ಈ ತಪಾವತು ಕೈ ತಪ್ಪಿನಿಂದ

ಆಗಿರುವುದು ಧೃಢಪಡುತ್ತದೆ. ಸದ್ರಿ ದಾಖಲೆಯನ್ನು ಸರಿಪಡಿಸುವುದು ಸೂಕ್ತವೆಂದು ಪರಿಗಣಿಸಿ ಈ ಕೆಳಗಿನಂತೆ ಆದೇಶ ಮಾಡಿದೆ.

**ಆದೇಶ.**

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಪುತ್ತೂರು ತಾಲೂಕು ಉಪ್ಪಿನಂಗಡಿ ಹೋಬಳಿ ಪಡ್ನೂರು ಗ್ರಾಮದ ಎಂ ಆರ್ ಸಂಖ್ಯೆ: 67/98-99 ದಿ: 10/06/99 ರಲ್ಲಿ ಹಕ್ಕು ಬದಲಾವಣೆ ವಹಿಯಲ್ಲಿ ಕಲಂ ಸಂಖ್ಯೆ ಎರಡರಲ್ಲಿ ಎನ್ ಸಿ ಆರ್ ಎಸ್ ಆರ್ 132/91-92 ಎಂದು ದಾಖಲಿರುವುದನ್ನು ನಿಯಮಾನುಸಾರ ಪರಿಶೀಲಿಸಿ, ಎನ್ ಸಿ ಆರ್ ಎಸ್ ಆರ್ 152/91-92 ಎಂದು ತಿದ್ದುಪಡಿ ಮಾಡಿ ದಾಖಲಿಸಲು ತಹಶೀಲ್ದಾರರು, ಪುತ್ತೂರು ತಾಲೂಕು, ಪುತ್ತೂರು ಇವರಿಗೆ ಆದೇಶಿಸಿದೆ.

ಈ ಆದೇಶವನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ಕೊಟ್ಟು ಬೆರಳಚ್ಚು ಪಡಿಸಿ, ಪರಿಷ್ಕರಿಸಿ ಈ ದಿನ ದಿನಾಂಕ: 26 - 10 - 2016 ರಂದು ಬಹಿರಂಗ ನ್ಯಾಯಾಲಯದಲ್ಲಿ ಉದ್ಘೋಷಿಸಲಾಯಿತು.

Rajendra

ಡಾ. ರಾಜೇಂದ್ರ ಕೆ.ವಿ. ಐ.ಎ.ಎಸ್

ಸಹಾಯಕ ಆಯುಕ್ತರು,

ಪುತ್ತೂರು ಉಪವಿಭಾಗ, ಪುತ್ತೂರು ದ.ಕ

ಪ್ರತಿ: ಮೇಲ್ಮನವಿದಾರರ ಪರ ನ್ಯಾಯವಾದಿ ಶ್ರೀ ಉದಯರವಿ ಕೆ ಇವರ ಮುಖಾಂತರ ಜ್ಯಾರಿ.

ಪ್ರತಿ: ತಹಶೀಲ್ದಾರರು ಪುತ್ತೂರು ತಾಲೂಕು ಇವರಿಗೆ ಕಡತ ಸಂಖ್ಯೆ ಎನ್ ಸಿ ಆರ್ ಎಸ್ ಆರ್ 152/91-22 ಪುಟಸಂಖ್ಯೆ 1 ರಿಂದ 34 ರ ತನಕ ಕಡತದೊಂದಿಗೆ ಸೂಕ್ತ ಕ್ರಮಕ್ಕಾಗಿ.